Sri H. M. CHANNABASAPPA.—A specific ruling on the point whether the Government has failed to advise the Governor in time, to prorogue and also address this Assembly, has to be given. Our point is that the Government has failed in its duty. My point was that this Government has deliberately failed to advise the Government to do his function under Arts. 175 and 176. You never touched that point. The Chief Minister stated that they had no time. In the Parliament, the Central Government is presenting the Budget after the 23rd, after the President's Address. By the failure of the Government, our rights are in jeopardy; Government is responsible for it. So, we request you to safeguard our rights. Instead of giving ruling on that point of loss of our rights and privileges, you have given ruling on some other point.

Mr. SPEAKER.—On this point also, I gave my ruling. It is a point for reply by the Government. I have come to the conclusion that there is no breach of privilege at all; that is my finding.

Notice of Adjournment Motion *re*: lack of confidence in the Council of Ministers in view of the Mid-term Poll Results of Lok Sabha.

Sri H. M. CHANNABASAPPA.—We have given another notice of adjournment. There is an adjournment motion tabled by me and the Hon. Member Sri Nanje Gowda. I hope you will give your best attention to it.

Mr. SPEAKER.—Yes.

Sri H. M. CHANNABASAPPA.—Our motion reads thus:

> "This House do stand adjourned to discuss a matter of urgent public importance of recent occurrence, namely, the situation arising out of the unprecedented expression of complete lack of confidence in the Chief Minister and his Council of Ministers in the recent mid-term poll to the Lok Sabha as evidenced by the wholesale rejection by the electorate of all the 27 candidates set up and supported by them in all the 27 Constituencies by a huge majority of votes, in spite of the myth of propaganda by the Chief Minister on the border and Cauvery issues that he is the sole saviour of the interests of Mysore State."

Sri RAMAKRISHNA HEGDE.—May I point out a factual error in his statement? The Ruling Party had set up only 17 candidates.

Sri H. M. CHANNABASAPPA.—The ruling party was in connivance with other parties; they joined hands with other parties.

Sri N. CHIKKE GOWDA.—I am on a point of order. I am making a suggestion. I am not casting aspersions on the Chair. I request the Hon. Chair to talk less and allow the Hon. Members to speak.

Mr. SPEAKER.—This is most objectionable. It is not fair to make such comments on the Chair. I have never curtailed the liberty of the members to speak. Now, I request Sri Channabasappa to speak on the point of admissibility of his motion.

Sri R. DAYANANDA SAGAR.—Please allow Sri Channabasoppa to speak without interruption. You are pulling up everybody ; you cannot do it. Please do not do like that.

Sri H. M. CHANNABASAPPA.—You must expect a sense of responsibility from me. You cannot go on interrupting me every time.

ಸ್ವಾಮಿ, ಈ ನಿಲುವಳಿ ಸೂಚನೆಯು ಬಹಳ ಮಹತ್ವವಾದುದು. ಇವೊತ್ತಿನ ದಿವಸ ಈ ಬಡ್ಜೆಟ್ ಅಧಿವೇಶನ ನಡೆಸುವುದಕ್ಕೆ, ಮತ್ತು ಬಡ್ಜೆಟ್ ಇಲ್ಲಿ ಮುಂಡನೆ ಮಾಡುವುದಕ್ಕೆ ಇವರಿಗೆ ಅಧಿಕಾರ ಇದೆಯೇ ಇಲ್ಲವೇ ಎಂಬ ಪ್ರಶ್ನೆ ಇದರಲ್ಲಿ ಬರುತ್ತದೆ. ಈ ಸಭೆಯ ಕಾರ್ಯ ಕಲಾಪಗಳು ಮುಂದುವರಿಯುವ ಮುನ್ನ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಇದನ್ನು ಮೂವ್ ಮಾಡಿದ್ದೇವೆ. ಅಡ್ವರ್ಟೈಸ್‌ಮೆಂಟ್ ಮೋಷನ್ನಿನಲ್ಲಿ ಹೇಳಿರುವಂತೆ ಇದು ಬಹಳ ಪ್ರಾಮುಖ್ಯವಾದ ಮತ್ತು ತೀವ್ರವಾದ ವಿಚಾರ. ಅಲ್ಲದೆ, ಇದು ಇತ್ತೀಚೆಗೆ ನಡೆದಂತಹ ವಿಚಾರ. ಇದರಲ್ಲಿ ಮೂರು ಅಂಶ ಇದೆ. ವಾನ್ಯ ಮುಖ್ಯಮಂತ್ರಿಯವರು ಮತ್ತು ಅವರ ಅನುಯಾಯಿಗಳು ದೇಶದ ಮುಂದೆ ಮೂರು ಅಂಶಗಳನ್ನು ಇಟ್ಟು ಜನತೆಯ ಒಟನ್ನು ಕೇಳಲಿಕ್ಕೆ ಹೋಗಿದ್ದಾರೆ. ಅವರು, ನಮ್ಮ ರಾಜ್ಯದ ನೆಲ, ಜಲ ರಕ್ಷಣೆಗೋಸ್ಕರ ಒಟನ್ನು ಕೇಳಿದ್ದಾರೆ. ಎರಡನೆಯದು, ಯಾವುದಾದರೂ ಒಟು ಇಂದಿರಾಗಾಂಧಿಗೆ ಹೋದರೆ, ಅದು ರಾಜ್ಯದ ಹಿತಕ್ಕೆ ವಿರೋಧವಾಗಿ ಹೋದಂತೆ ಎಂದೂ ಹೇಳಿದ್ದಾರೆ. ಅದರ ಜೊತೆಗೆ ಇಂದಿರಾಗಾಂಧಿಗೆ ಒಟು ಕೊಟ್ಟರೆ, ಅದು ರಾಜ್ಯಕ್ಕೆ ದ್ರೋಹ ಮಾಡಿದಂತಾಗುತ್ತದೆ ಎಂದೂ ಹೇಳಿದ್ದಾರೆ. ಅಲ್ಲದೆ ಮೂರನೆಯದು ಇವರು ಪ್ರಜಾಪ್ರಭುತ್ವದ ರಕ್ಷಣೆಯನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ. ಈ ಮೂರು ಇಷ್ಯೂಗಳನ್ನು ದೇಶದ ಮುಂದೆ ಇಟ್ಟು ಇವರು ಒಟು ಕೇಳಿದರು. ಆ ರೀತಿ ಕೇಳುವುದೇ ಅಲ್ಲ, ಇವರು ಇನ್ನೂ ಮಾಡಬಾರದ ಕರ್ಮಗಳನ್ನು ಮಾಡಿದ್ದಾರೆ. ಅದು ಒಂದು ದೊಡ್ಡ ಕರ್ಮಕಾಂಡ. ಆ ವಿಷಯಗಳನ್ನು ಆಮೇಲೆ ಹೇಳುವುದಕ್ಕೆ ಅವಕಾಶವಿದೆ. ಇವತ್ತು ಏನಾಯಿತು ಅಂದರೆ, ದೇಶದ ಮೂಲೆಮೂಲೆಯಲ್ಲಿಯೂ ಇವರ ಹಾಡು ಒಂದೇ, ಹಾವಾಡಿಗನಾದವನು ಹಾವುಗಳನ್ನು ಇಟ್ಟುಕೊಂಡು ಪುಂಗಿ ಬಾರಿಸಿಕೊಂಡು ಹೋಗುವಂತೆ ಇವರು ದೇಶದ ಮುಂದೆ ತಮ್ಮ ಅಭಿಪ್ರಾಯವನ್ನು ಇಟ್ಟರು. ಜನರು ಇದನ್ನು ಕೇಳಿದರು. ಕೇಳಿ ಏನಾಯಿತು ಅಂದರೆ ನಿಮ್ಮಲ್ಲಿ ನಮಗೆ ನಂಬಿಕೆಯಿಲ್ಲ, ದೇಶ ದ್ರೋಹಿಗಳು ಅವರಲ್ಲ, ನೀವು ದೇಶದ್ರೋಹಿಗಳು ಎಂದು ಜನ ಹೇಳಿದರು. ನೆಲ-ಜಲ ಇವೆರಡರ ವಿಷಯಗಳಲ್ಲಿ ಪುಂಗಿ ಆಟ ಆಡುತ್ತಿದ್ದಾರೆ. ಕೋತಿ ಮೊಸರನ್ನವನ್ನು ತಿಂದು ಮೇಕೆ ಬಾಯಿಗೆ ಒರೆಸಿದಂತಾಗಿದೆ. ನೀವು ಮಾಡಬಾರದಂಥ ಅಪರಾಧಗಳನ್ನು ಮಾಡಿ ಬಚ್ಚಿಟ್ಟುಕೊಂಡು ಅವುಗಳನ್ನು ತೆಗೆದುಕೊಂಡು ಹೋಗಿ ಇನ್ನೊಬ್ಬರ ಮೇಲೆ ಹೊರಿಸುತ್ತಿದ್ದೀರಿ ಎಂಬುದಾಗಿ ಒಟುದಾರರು ಹೇಳುತ್ತಿದ್ದಾರೆ. ನಮಗೆ ಒಟು ಕೊಟ್ಟವರು ದೇಶದ್ರೋಹಿಗಳು ಆಗುತ್ತಾರೆಂದು ಅರ್ಥಬರುವ ರೀತಿಯಲ್ಲಿ ಯಾವ್ಯಾವುದೋ ವಿಷಯಗಳನ್ನು ಈ ದೇಶದ ಮುಂದೆ ಇಟ್ಟು ಒಟು ಕೇಳಿದಿರಿ. ಅವೆಲ್ಲವೂ ಸತ್ಯಕ್ಕೆ ದೂರವಾಗಿ ಆಯಿತು. ನಿಮ್ಮಲ್ಲಿ ನಮಗೆ ನಂಬಿಕೆ ಇಲ್ಲ, ನೀವು ನೆಲ-ಜಲ ರಕ್ಷಣೆಗೋಸ್ಕರ, ನೀವೇ ದ್ರೋಹ ಮಾಡಿರತಕ್ಕದ್ದು ಎನ್ನುವುದನ್ನು ನಿರ್ಣಾಂತ ಮಾಡುವ ರೀತಿಯಲ್ಲಿ ಜನರು ತೀರ್ಪು ಕೊಟ್ಟಿದ್ದಾರೆ. ಇಡೀ ಮೈನೂರು ರಾಜ್ಯದಲ್ಲಿ ಇವರು ಭವ್ಯವಾದ ಕೋಟೆಗಳನ್ನು ಎಲ್ಲೆಲ್ಲಿ ಮಾಡಿಕೊಂಡಿದ್ದರೋ, ಎಲ್ಲೆಲ್ಲಿ ಕೋಟೆಗಳನ್ನು ಕಟ್ಟಿಕೊಂಡಿದ್ದರೋ, ಎಷ್ಟೆಷ್ಟು ಕಾವಲುಗಾರರನ್ನು ಇಟ್ಟು ಬಂದೋಬಸ್ತುಗಳನ್ನು ಮಾಡಿಕೊಂಡಿದ್ದರೋ ಅಂಥ ಕೋಟೆಗಳ ಬೀಗಗಳೆಲ್ಲಾ ಕಳಚಿಹಾಕಿಕೊಂಡು ಲಂಗು-ಲಗಾಮು ಇಲ್ಲದಂತಾಗಿದೆ. ಅಂತಹ ಜನರು ಇವರು. ಇವರು ಈ ದೇಶದಲ್ಲಿ ನಾಯಕರಾಗುವುದಕ್ಕೆ ಮತ್ತು ಈ ದೇಶದ ಆಡಳಿತವನ್ನು ನಡೆಸುವುದಕ್ಕೆ ಲಾಯಕ್ಕಿಲ್ಲ, ಇವರ ವಿಷಯದಲ್ಲಿ ನಂಬಿಕೆ ಇಲ್ಲ, ಆದ್ದರಿಂದ ಇವರನ್ನು ತಿರಸ್ಕಾರ ಮಾಡಿದ್ದೇವೆಂದು ಹೇಳಿದ್ದಾರೆ. ಇವರು ಕೆಲವು

(SRI H. M. CHANNABASAPPA)

ನಂಗಾತಿಗಳೊಡನೆ 27 ಜನರನ್ನು ನಿಲ್ಲಿಸಿದ್ದರೂ ಅವರೆಲ್ಲರನ್ನೂ ಜನ ತಿರಸ್ಕಾರ ಮಾಡಿ, ನಿಮ್ಮಲ್ಲಿ ನಮಗೆ ನಂಬಿಕೆ ಇಲ್ಲವೆಂದು ಎಲ್ಲರನ್ನೂ ವಾಷ್‌ಔಟ್ ಮಾಡಿ, ಇವರಲ್ಲಿ ಅಪನಂಬಿಕೆ ಪೂರ್ಣವಾಗಿದೆ, ಇವರು ಪೂರ್ಣ ಅಪನಂಬಿಕೆಯುಳ್ಳಂಥ ಜನರು ಎಂಬುದಾಗಿ ಜನರೇ ಈಗ ತೀರ್ಮಾನ ಕೊಟ್ಟಿದ್ದಾರೆ. ಈ ತೀರ್ಮಾನವನ್ನು ಕೊಟ್ಟಿರುವುದು ಕೇವಲ ಕೆಲವು ದಿನಗಳ ಹಿಂದೆ. ಈ ತೀರ್ಮಾನವನ್ನು ಕೊಟ್ಟ ಮೇಲೆ ಪ್ರಜಾಸತ್ತೆಗೆ ಬೆಲೆ ಕೊಟ್ಟಿರುವ ಯಾವ ಮನುಷ್ಯನೇ ಆಗಲೀ, ಇಷ್ಟು ಹೊತ್ತಿಗೆ ಏನು ಮಾಡ ಬೇಕಾಗಿತ್ತೆಂದು ಹೇಳುವುದು ನಮಂಜಸವಾದುದು, ಇವರು ಈಗ ಪ್ರಜಾಸತ್ತೆಯ ರಕ್ಷಕರು ಎಂದು ಹೇಳುತ್ತಿದ್ದಾರೆ. ನಾವು ರಕ್ಷಣೆ ಮಾಡಿದವರು ಎಂದು ಭದ್ರವಾದ ಕುರ್ಚಿಗಳಿಗೆ ಇನ್ನೂ ಅಂಟಿಕೊಂಡೇ ಕುಳಿತುಕೊಂಡಿದ್ದಾರೆ. ಈಗಾಗಲೇ ಅನೇಕ ರೀತಿಯಲ್ಲಿ ಅವರ ಸ್ನೇಹಿತರಿಗೆ ನೋವು ಆಗಿದೆ. ಇವರು ಮಾಡಿದಂಥ ತಪ್ಪಿಗೆ ಅವರಿಗೆ ಬೆಂಬಲವಿಲ್ಲ. ಬೆಂಬಲ ಇದೆಯೇ ಇಲ್ಲವೇ ಎಂಬುದನ್ನು ಅವರೇ ಅವರ ಅಂತರಂಗದ ನಾಡಿ ಹಿಡಿದು ನೋಡುತ್ತಿದ್ದಾರೆ, ಮುಂದೆ ಮಾಡು ವುದು ಏನೆಂದು ಒದ್ದಾಡುತ್ತಿದ್ದಾರೆ. ಎಲ್ಲಿ ಹೋಗುವುದು, ಅರಣ್ಯಕ್ಕೆ ಹೋಗುವುದೇ ಎಂದು ಒದ್ದಾಡುತ್ತಿದ್ದಾರೆ. ಇದಕ್ಕೆ ಪುರಸ್ಕಾರ ಕೊಟ್ಟು, ಮನ್ನಣೆ ಕೊಟ್ಟು ಇವರು ಈ ದೇಶದ ನಾಯಕರಂತೆ ಈ ರಾಜ್ಯದ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ಇವರಿಗೆ ತಾವು ಅವಕಾಶ ಕೊಟ್ಟಿದ್ದೇ ಆದರೆ, ತಾವೂ ಸಹ ಇವರ ಜೊತೆಯಲ್ಲಿ ಸೇರಿಕೊಂಡು ಪ್ರಜಾಸತ್ತೆ ಯನ್ನು ಕೊಲೆಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ತಾವು ಈ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಆಲೋಚನೆ ಮಾಡತಕ್ಕದ್ದು ಒಳ್ಳೆಯದು. ತಾವು ಪ್ರಪಂಚವನ್ನೇ ಸುತ್ತಿ ಬಂದಿದ್ದೀರಿ. ಎಲ್ಲೆಲ್ಲ ಯಾವ್ಯಾವ ರೀತಿ ನಡೆಯುತ್ತಿದೆಯೆಂಬುದನ್ನು ನೋಡಿ ಬಂದಿದ್ದೀರಿ. ನನ್ನ ಎದುರಿಗೆ ಕೂತಿರತಕ್ಕ ಸ್ನೇಹಿತರಲ್ಲಿ ಅನೇಕರು ನನ್ನ ಹಳೆಯ ಮಿತ್ರರು, ಅವರೆಲ್ಲರಿಗೂ ನಾಡಿ ಹೇಗೆ ಹೇಗೆ ಆಡುತ್ತಿದೆಯೆಂಬುದು ಗೊತ್ತು. ಈಗ ಬಂದಿರುವ ಪ್ರಶ್ನೆ ನಂಬಿಕೆ ಯನ್ನು ಕಳೆದುಕೊಂಡಿರುವ ಮಂತ್ರಿಮಂಡಲ. ಈಗ ಈ ಬಜೆಟ್ಟನ್ನು ಪ್ರೆಸೆಂಟ್ ಮಾಡುವುದ ಕ್ಕಾಗುತ್ತದೆಯೇ ಎಂಬುದು. ಮಾನ್ಯ ಮುಖ್ಯಮಂತ್ರಿಗಳು, ನನ್ನ ಸ್ನೇಹಿತರು ಮತ್ತು ನನ್ನ ಹಳೆಯ ಮಿತ್ರರು ಪ್ರಜಾಸತ್ತೆಗೆ ಬೆಲೆ ಕೊಡುವವರು. ಅವರ ಪೈಕಿ ಫೈನಾನ್ಸ್ ಮಿನಿಸ್ಟರ್ ತಮ್ಮ ಭಾಷಣವನ್ನು ಓದುವುದಿಲ್ಲವೆಂದು ಬಿಟ್ಟರೂ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಅವರನ್ನು ಬಿಡರು. ಆದ್ದರಿಂದ ಶ್ರೀಮಾನ್ ಹೆಗಡೆಯವರು ತಮ್ಮಲ್ಲಿ ತಾವೇ ಯೋಚನೆಮಾಡಿ ಈಗ ಬಡ್ಜೆಟ್ ಪುಸ್ತಕವನ್ನು ಇಲ್ಲಿ ಇಡುವುದಿಲ್ಲವೆಂದು ಹೇಳಿ ಹೊರಟುಹೋಗಬಹುದು. He is one of the young men who has always respect for Democracy and the highest regard for democratic principles and he cannot do anything against his own conscience. I know that, but if ever he succumbs to the pulls and pressures of evil political forces that are working, I must only pity him. My sympathies are always with him, but not with the Chief Minister. ಆದರೆ, ಮಾನ್ಯ ಮುಖ್ಯಮಂತ್ರಿಗಳು ಇವರೆಲ್ಲರನ್ನೂ ಹಿಡಿದುಕೊಂಡಿದ್ದಾರೆ. ಇದು ಪ್ರಜಾಸತ್ತೆಗೆ ಸಂಬಂಧಪಟ್ಟ ವಿಷಯ. ಮಾನ್ಯ ಮುಖ್ಯಮಂತ್ರಿಗಳ ವಿಷಯದಲ್ಲಿ ಪರ್ಸನಲ್ಲಾಗಿ ನನಗೇನೂ ವೈಷಮ್ಯ ಇಲ್ಲ. ಇವರ ಭದ್ರವಾದ ಕೋಚೆ ಗುಲ್ಬರ್ಗ. ಚಿಂಚೋಳಿ ಅವರ ಭದ್ರವಾದ ಕೋಚೆ. ಇಂದಿರಾಗಾಂಧಿ ಹಠಾವ್ ಎಂದು ಇವರು ಹೇಳುತ್ತಿದ್ದರೆ, ಅಲ್ಲಿನವರು ''ಶ್ರೀ ನಿಜಲಿಂಗಪ್ಪ ಹಠಾವ್'' ''ಶ್ರೀ ವೀರೇಂದ್ರಪಾಟೀಲ್ ಹಠಾವ್'' ಎಂದು ಹೇಳುತ್ತಿದ್ದಾರೆ. ನಾನು ಚಿಂಚೋಳಿಗೆ ಹೋಗಿದ್ದೆ. ಗುಲ್ಬರ್ಗಾಕ್ಕೂ ಹೋಗಿದ್ದೆ. ಇಡೀ ದೇಶದಲ್ಲಿ ಒಟುದಾರರಲ್ಲಿ ಬಹುತೇಕ ಜನರು ನೀವು ಅಧಿಕಾರ ದಲ್ಲಿರುವುದಕ್ಕೆ ನಂಬಿಕಾರ್ಹರಲ್ಲವೆಂದು ಇವರಿಗೆ ಹೇಳಿರುವಾಗ, ನಾನು ಈ ಕುರ್ಚಿ ಬಿಟ್ಟು ಅರ್ಜಾಡು ವುದಿಲ್ಲವೆಂದು ಹೇಳಿದರೆ ಡೆಮಾಕ್ರೆಸಿಗೆ ಮತ್ತೊಂದು ಅಪಘಾತ, ಬಹಳ ತೀವ್ರಗತಿಯಿಂದ ಕೂಡಿ ದುದು ಯಾವುದೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡತಕ್ಕದ್ದು ಈ ಒಂದು ಕಾರ್ಯಕ್ರಮಕ್ಕೆ ಕೈಹಾಕಬೇಡಿ. ಆದ್ದರಿಂದ ಇವತ್ತೇ ರಾಜೀನಾಮೆ ಕೊಟ್ಟರೆ ಬಹಳ ಒಳ್ಳೆಯದು. ನಾವು ಈಗ ಹಣಕಾಸಿನ ಪತ್ರವನ್ನು ಇಡುವುದಿಲ್ಲ, ನಮ್ಮನ್ನು ದೇಶದಲ್ಲಿ ಜನರು ತಿರಸ್ಕಾರ ಮಾಡಿ ದ್ದಾರೆ. ನಾವು ಕೆಲವು ದಿನಗಳು ಅಜ್ಞಾತವಾಸ ಹೋಗುತ್ತೇವೆ, ನಾವು ಶುದ್ಧೀಕರಣವಾದಮೇಲೆ ಪುನಃ ಈ ದೇಶದಲ್ಲಿ ನಮ್ಮನ್ನು ಬನ್ನಿ ಎಂದು ಕರೆದಾಗ ಬರುತ್ತೇವೆಂದು ಈಗಲೇ ಹೇಳತಕ್ಕದ್ದು ಬಹಳ ಗೌರವ. ಅದು ಒಳ್ಳೆಯ ಉನ್ನತಮಟ್ಟದ ರಾಜಕೀಯ. ಆದ್ದರಿಂದ ತಾವು ಈ ಸಭೆಯ ಕಾರ್ಯಕಲಾಪಗಳು ಮುಂದುವರಿಯುವುದಕ್ಕೆ ಅವಕಾಶ ಕೊಡಬಾರದು. ತಾವು ನಮ್ಮ ಹಕ್ಕು ಬಾಧ್ಯತೆಯ ರಕ್ಷಕರು, ಪ್ರಜಾಸತ್ತೆಯ ರಕ್ಷಕರು, ಈ ದೇಶದ ರ ಣೆಯನ್ನು ಯಾವ ರೀತಿ ಮಾಡ

ಬೇಕೆಂಬುದನ್ನು ತಿಳಿದವರು, ಆದ್ದರಿಂದ ಕೊನೆಯದಾಗಿ ತಮ್ಮಿಂದ ನ್ಯಾಯವನ್ನು ನಿರೀಕ್ಷಣೆ ಮಾಡುತ್ತೇವೆ. ಅದನ್ನು ಕೊಡದೆ ಹೋದರೆ, ಅವರು, ತಾವು ಜೊತೆಯಲ್ಲಿ ಹೋಗುತ್ತೀರಿ. ಆದ್ದರಿಂದ ತಮಗೆ ಅಪೀಲು ಮಾಡಿಕೊಳ್ಳುತ್ತೇನೆ, ತಾವು ಉದ್ದೇಶಪೂರ್ವಕವಾಗಿ ಏನೂ ಮಾಡುವುದಿಲ್ಲ. ತಾವು ನನಗೆ ಬಹಳ ಹಳೆಯ ಮಿತ್ರರು. ಈ ನಿರ್ಣಯದ ಮೂಲ ಉದ್ದೇಶ ಇಪತ್ತು ಇನ್ನೂ ಬಜೆಟ್ ಪ್ರಸೆಂಟ್ ಮಾಡುವುದಕ್ಕೆ ಶುದ್ಧಿಯಾಗಿ ಅವರು ಬಂದಿಲ್ಲ. ಅವರನ್ನು ಹೇಗೋ ಇಲ್ಲಗೆ ದಬ್ಬಿದ್ದಾರಷ್ಟೆ.

4-30 P.M.

ಆದುದರಿಂದ ದಯವಿಟ್ಟು ತಾವು ಬಡ್ಜೆಟ್ ಪ್ರಜೆಂಟೇಷನ್ ಮಾಡುವುದಿಲ್ಲ ಎಂದು ಹೇಳಿದರೆ ನಾನು ನನ್ನ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಈಗ ಬಂದಿರತಕ್ಕದ್ದು ಏನೆಂದರೆ ದೇಶದಲ್ಲಿ ಮಾನ್ಯತೆ, ಗೌರವ ನಂಬಿಕೆ ಎಲ್ಲವನ್ನೂ ಸಂಪೂರ್ಣವಾಗಿ ಕಳೆದುಕೊಂಡಿರತಕ್ಕ ಸರಕಾರ ಬಡ್ಜೆಟನ್ನು ಪ್ರೆಸೆಂಟ್ ಮಾಡುವ ಹತ್ಯುಭಾಧ್ಯತೆಯನ್ನು ಹೊಂದಿರುವುದಿಲ್ಲ. ಅದಕ್ಕೋಸ್ಕರವಾಗಿ ಈಗ ನಮ್ಮ ಕಾರ್ಯಕ್ರಮ ಏನು ಇವೆ ಅದನ್ನು ಮುಂದೂಡಬೇಕು. ಅವರಿಗೆ ನೈತಿಕ ಶಕ್ತಿಯ ಅಧಿಕಾರ ಇವೆ ಎನ್ನುವುದು ಇತ್ಯರ್ಥವಾದ ಮೇಲೆ ಮುಂದಿನ ಕ್ರಮ ಕೈಕೊಳ್ಳಬಹುದು. ಸದ್ಯಕ್ಕೆ ಈ ಕಾರ್ಯಕ್ರಮಗಳನ್ನು ತಡೆಹಿಡಿದು ಈ ಸರಕಾರದ ಮೇಲೆ ನಂಬಿಕೆ ಇದೆಯೇ ಇಲ್ಲವೇ ಎಂಬ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ.—ಎರಡು ಮಾತಿನಲ್ಲಿ ನಾನು ಹೇಳತಕ್ಕಂಥದ್ದನ್ನು ತಮ್ಮ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು ಏತಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ತಂದಿದ್ದಾರೆ ಎನ್ನುವುದನ್ನು ತಮಗೆ ತಿಳಿಸಿದ್ದಾರೆ. ನಮ್ಮ ಪಕ್ಷದ ಪರವಾಗಿ ಅವರು ಈ ನಿಲುವಳಿ ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈಗ ನಾನು ಮಾತನಾಡತಕ್ಕ ವಿಷಯದಲ್ಲಿ ಕೇವಲ ಈ ಸರಕಾರಕ್ಕೆ ಸಂಬಂಧಪಟ್ಟ ಹಾಗೆ ಏನೂ ಹೇಳುತ್ತಾ ಇಲ್ಲ. ಏಕೆಂದರೆ ಈ ಸರಕಾರಕ್ಕೆ ಏನು ಹೇಳಿದರೂ ಏನೂ ಪ್ರಯೋಜನವಿಲ್ಲ ಎನ್ನುವುದು ನಮ್ಮ ಅನುಭವಕ್ಕೆ ಬಂದಿದೆ. ಏಕೆಂದರೆ ''ಮೂರ್ಖಂಗೆ ನೂರ್ತರಂ ಬುದ್ಧಿ ಹೇಳುವುದು ಗೋರ್ಕಲ್ಲಮೇಲೆ ಮಳೆ ಸುರಿದಂತೆ'' ಎಂದು ಸರ್ವಜ್ಞ ಕವಿ ಹೇಳಿದಹಾಗೆ ಅವರಿಗೆಷ್ಟು ಸಾರಿ ಹೇಳಿದರೂ ಪ್ರಯೋಜನವಿಲ್ಲ. ಅದಕ್ಕೋಸ್ಕರ ಈಗ ನಾನು ಹೇಳತಕ್ಕಂಥಾದ್ದು ಇಲ್ಲಿ ಕೆಲವರ್ಷು ಪ್ರಾಜ್ಞರು ಇದ್ದಾರೆ. ಮುಖ್ಯ ಮಂತ್ರಿಗಳ ವಿಚಾರವೂ ಗೊತ್ತು. ಅವರು ಯಾರೋ ಮಾಡಿದ ಪಾಪಕ್ಕೆ ಹೊಣೆ ಆಗಿದ್ದಾರೆ. ಅದಕ್ಕೆ ಇವರು ತಗುಲಿಹಾಕಿಕೊಂಡಿದ್ದಾರೆ. ಇವರ ಮಂತ್ರಿ ಮಂಡಲ ಮಾಡಿದ ಪಾಪಕ್ಕೆ, ಅನೇಕ ಜನ ಮಾನ್ಯ ಸ್ನೇಹಿತರು, ಘನತೆ ಇರುವವರು, ನಿರಪರಾಧಿಗಳೂ ಸಹ ಈ ಹುಸ್ಸು ಹೊಳೆಯಲ್ಲಿ ಕೊಚ್ಚಿಹೋಗುವ ಪರಿಸ್ಥಿತಿ ಬಂದಿದೆ. ಈ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಿದಂಥ ದುರಾಡಳಿತಕ್ಕೆ ಜನ ರೋಸಿಹೋಗಿ, ಬೇಸತ್ತು ನಿಮ್ಮಲ್ಲಿ ಯಾವ ರೀತಿಯಾದ ನಂಬಿಕೆಯನ್ನೂ ಇಟ್ಟುಕೊಳ್ಳದೆ ಸಧ್ಯ ನೀವು ತೊಲಗಿ, ನಿಮ್ಮ ರಾಜ್ಯಭಾರದಿಂದ ದೇಶಕ್ಕೆ ಕ್ಷೇಮವಾಗುವುದಿಲ್ಲ ಎಂದು ರಾಜ್ಯದಲ್ಲಿ ಅದ್ವಿತೀಯ ರೀತಿಯಿಂದ ತೋರಿಸಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಜನತೆ ಅಖಂಡ ವಿಶ್ವಾಸವನ್ನು ಮತ್ತು ಪ್ರೀತಿಯನ್ನು ಇಟ್ಟು, ಅವರು ಬಡ ಜನತೆಗೆ ಅನುಕೂಲ ಮಾಡುತ್ತಾರೆ, ಬಡ ಜನತೆಯ ರಕ್ಷಣೆ ಮಾಡುತ್ತಾರೆ ಎನ್ನುವ ದೃಷ್ಟಿಯಿಂದ ಬಡ ಜನತೆ ಸ್ವಯಂ ಪ್ರೇರಿತರಾಗಿ ಬಂದು ಅವರಿಗೆ ಮತವನ್ನು ಕೊಟ್ಟರು. ನಮ್ಮ ಅಧ್ಯಕ್ಷರು ಹೇಳಿದಹಾಗೆ ಯಾವ ದುಡ್ಡಿನ ಪ್ರಭಾವವೂ ಇದರಲ್ಲಿ ಇಲ್ಲ ಎಂದು ಹೇಳಲು ಸಂತೋಷ ಪಡುತ್ತೇನೆ. ದುಡ್ಡು ಏನೂ ಇಲ್ಲ ಎಂದು ನೀವೇ ಹೇಳಿದರಿ ಅಂದಮೇಲೆ ನಾನು ಹೇಳುವುದು ಇಷ್ಟೇ. ಇದರಲ್ಲಿ ಎರಡು ವಿಧ ಇದೆ. ಒಂದು ಹೈಕೋರ್ಟ್ ಏನಾದರೂ ಹೇಳಿದರೆ ಅದನ್ನು ಕೋರ್ಟ್ ತೀರ್ಪು ಎಂದು ಒಪ್ಪಿಕೊಳ್ಳುತ್ತೇವೆ. ಎಲ್ಲಕ್ಕಿಂತಲೂ ಹೆಚ್ಚಿನ ಕೋರ್ಟು ಜನತೆಯ ಕೋರ್ಟು ಎಂದು ಇಂಗ್ಲೆಂಡಿನಲ್ಲಿ ಹೇಳುತ್ತಾರೆ, ಏಕೆ ಪ್ರಜಾಪ್ರಭುತ್ವ ಇರತಕ್ಕ ಎಲ್ಲಾ ದೇಶದಲ್ಲಿಯೂ ಹೇಳುತ್ತಾರೆ. ಈಗ ಜನತೆಯ ಕೋರ್ಟು ನಿಮ್ಮಲ್ಲಿ ನಂಬಿಕೆ ಇದೆ ನೀವು ಬೇಡ, ಸಧ್ಯ ತೊಲಗಿಹೋಗಿ ಎಂದು ಒಂದು ದಾರಿಯನ್ನು ತೋರಿಸಿದ್ದಾರೆ. ನೀವು ಅಧಿಕಾರಕ್ಕೆ ಅಂಟಿಕೊಂಡಿದ್ದೀರಿ ಎಂದು ನಾನು ಹೇಳುವುದಿಲ್ಲ. ಏನೋ ಒಂದು ತಡೆ ಹಾಕಿಕೊಂಡು, ಏನೋ ಒಂದು ಪ್ರತಿಷ್ಠೆಯಿಂದ, ಏನು ಮಾಡಿದರೂ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ನೀವು ಕಾಲನ ಮೇಲೆ ನಡೆಯುವ ಬದಲು ತಲೆಯ ಮೇಲಿನಿಂದ ನಡೆಯುತ್ತಿದ್ದೀರಿ. ಇನ್ನು ನಿಮ್ಮ ಆಡಳಿತವನ್ನು ಜನರು ಬಹುಕಾಲ ತಡೆಯುವುದಿಲ್ಲ. ನೀವು ಹೊರಕ್ಕೆ ಹೋಗಿ ಜನತೆಗೆ ಮುಖ ತೋರಿಸುವುದಕ್ಕೆ ಆಗುವುದಿಲ್ಲ. ಹೊರಕ್ಕೆ ಹೋದಾಗ ಜನ ನಿಮ್ಮನ್ನು ಯಾವ ರೀತಿಯಿಂದ ಕಾಣಬೇಕೋ

(ಶ್ರೀ ಎಚ್. ಸಿದ್ಧವೀರಪ್ಪ)

ಆ ರೀತಿಯಿಂದ ಕಾಣುತ್ತಾರೆ. ಪ್ರಸಕ್ತಪ್ರಭುತ್ವ ಇರತಕ್ಕ ಯಾವ ರಾಷ್ಟ್ರವನ್ನೇ ತೆಗೆದುಕೊಳ್ಳಿ. ಇಷ್ಟೊಂದು ಬಹುಮತದಿಂದ ನಿಮ್ಮ ಪಕ್ಷವನ್ನು ತಿರಸ್ಕಾರ ಮಾಡಿರಬೇಕಾದರೆ ನೀವಿನ್ನೂ ಅಧಿಕಾರದಲ್ಲಿ ಕೂತುಕೊಳ್ಳುತ್ತೀವೆ ಎಂದು ಹೇಳುವುದು ಹುಚ್ಚು ಧೈರ್ಯ, ಭಂಡ ಧೈರ್ಯ. ಇಂಥಾ ಧೈರ್ಯ ನಿಮಗೆ ಇರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಹಳ್ಳಿಗಳಲ್ಲಿ ತರುಣರು ತಾವು ಪ್ರಜಾಪ್ರಭುತ್ವದಲ್ಲಿ ದಾರಿ ತೋರಿಸುತ್ತೀರಿ ಎಂದು ಆಸೆ ಪಟ್ಟಿದ್ದರು. ಮಾನ್ಯ ಸ್ನೇಹಿತರಾದ ದೇವರಾಜ್ ಅರಸ್‌ರವರು ಹೇಳಿದಹಾಗೆ ತಾವು ಎರಡು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ಒಂದನೆಯದು, ರಾಜೀನಾಮೆ ಕೊಡುವುದು ಗೌರವಯುತವಾದದ್ದು. ಎರಡನೆಯದು, ಸಭೆಯನ್ನು ವಿಸರ್ಜನೆ ಮಾಡಿ ನಾವು ದೇಶದ ಮುಂದೆ, ಜನಗಳ ಮುಂದೆ ಚುನಾವಣೆಗೆ ನಿಲ್ಲುತ್ತೇವೆ, ಚುನಾವಣೆಯನ್ನು ಮಾಡಬೇಕೆಂದು ಕೇಳುತ್ತೇವೆ ಎನ್ನುವುದು. ಈ ಎರಡೂ ಕಾರ್ಯಕ್ರಮಗಳನ್ನು ಬಿಟ್ಟು ಇಲ್ಲಿ ಕುಳಿತುಕೊಳ್ಳುತ್ತೇವೆ ಎಂದು ತಾವು ತಿಳಿದಿದ್ದರೆ ಅದಕ್ಕೆ ಬೆಲೆ ಇದೆಯೇ? ಮಾನ್ಯ ಸ್ನೇಹಿತರು ಅನೇಕರು ಇದ್ದಾರೆ. ಅವರ ವಿಚಾರದಲ್ಲಿ ನನಗೆ ಗೌರವ ಇದೆ. ಪ್ರೀತಿ ಇದೆ. ಮಂತ್ರಿಮಂಡಲದಲ್ಲಿ ಇರತಕ್ಕವರು ಇದ್ದಾರೆ. ಬಾಕಿ ಕಡೆ ಇರತಕ್ಕವರು ಇದ್ದಾರೆ. ನಾಳೆ ಜನ ನಿಮ್ಮ ವಿಚಾರದಲ್ಲಿ ಏನು ಹೇಳುತ್ತಾರೆ ಎನ್ನುವ ವಿಚಾರ ಮಾಡಬೇಕು. ಏನೋ ಕುರುಡು ನೆಪ ಹೇಳಿ ಹಿಂದೆ ಕೈ ಎತ್ತುತ್ತಿದ್ದರು. ಇನ್ನು ಮುಂದೆ ಆ ಕೆಲಸವನ್ನು ದಯಮಾಡಿ ಮಾಡಬೇಡಿ. ನಾಳೆ ದಿವಸ ನಿಮ್ಮ ಸಭೆ ಸೇರಿದಾಗ ಕೂಲಂಕಷವಾಗಿ ವಿಚಾರ ಮಾಡಿ ದೇಶದ ಹಿತದೃಷ್ಟಿಯಿಂದ ನೀವು ಒಂದು ಕಾರ್ಯಕ್ರಮವನ್ನು ಸರಕಾರಕ್ಕೆ ತಿಳಿಸಬೇಕಾದರೆ ಅದಕ್ಕೆ ಎರಡು-ಮೂರು ವಿಧಾನಗಳು ಇವೆ. ಒಂದನೆಯದು ಶ್ರೀ ಸಿ. ಬಿ. ಗುಪ್ತರವರು ಹೇಳಿದರು.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ನಿಗೆ ಸಂಬಂಧಪಟ್ಟಹಾಗೆ ಹೇಳಿ.

Sri H. SIDDAVEERAPPA.—I am saying this in order to show how the Adjournment Motion is admissible.

Mr. SPEAKER.—I request the hon: Member to be brief.

ಶ್ರೀ ಎಚ್. ಸಿದ್ಧವೀರಪ್ಪ.—ಶ್ರೀ ಸಿ. ಬಿ. ಗುಪ್ತರವರು ಮತ್ತು ಶ್ರೀ ಎಸ್. ಕೆ. ಪಾಟೀಲರು ಅವರಂಥವರೇ ಈಗ ದೇಶದಲ್ಲಿ ಕಾಂಗ್ರೆಸ್ ಎಂದರೆ ಇಂದಿರಾ ಗಾಂಧಿ, ಇಂದಿರಾ ಗಾಂಧಿ ಎಂದರೆ ಕಾಂಗ್ರೆಸ್. ಈಗ ಇರತಕ್ಕ ಕಾಂಗ್ರೆಸ್ಸನ್ನು ವಿಸರ್ಜನೆ ಮಾಡಿ, ಇದರಿಂದ ನಮಗೂ ಪ್ರಯೋಜನವಿಲ್ಲ, ಇಂದಿರಾ ಗಾಂಧಿ ಕಡೆಗೆ ಕಾಂಗ್ರೆಸ್ ಪಕ್ಷವನ್ನು ಗೌರವಯುತವಾಗಿ ವಹಿಸಿಕೊಡಬೇಕು ಎಂದು ಹೇಳಿದ್ದಾರೆ. ಅದು ಕೆಲವರಿಗೆ ಹಿಡಿಸಲಿಲ್ಲ. ಅದು ನಿಮಗೆ ಸಂಬಂಧಪಟ್ಟದ್ದು. ನಿಮಗೆ ಈಗ ಬಂದಿರತಕ್ಕ ಕಷ್ಟ ಏನು ಎಂದರೆ ಎರಡು ವಿಷಯಗಳನ್ನು ಈ ಚುನಾವಣೆಯಲ್ಲಿ ಮುಂದೆ ಇಟ್ಟುಕೊಂಡು ದೇಶದ ಮೂಲೆ-ಮೂಲೆಗಳಲ್ಲಿ, ಹಳ್ಳಿ-ಹಳ್ಳಿಗಳಲ್ಲಿ ಹೇಳಿದಿರಿ. ಕಾವೇರಿ ಜಲ, ಬೆಳಗಾವಿ ನೆಲ ಎಂದು ಹೇಳುತ್ತಾ ನಾವು ದೇಶ ದ್ರೋಹಿಗಳು ಅಧಿಕಾರಕ್ಕೆ ಬಂದರೆ ಕಾವೇರಿ ಜಲ ಬತ್ತಿ ಹೋಗುತ್ತದೆ, ಬೆಳಗಾವಿ ನೆಲ ಅರಬ್ಬೀ ಸಮುದ್ರಕ್ಕೆ ಒದ್ದು ಹೋಗುತ್ತದೆ, ಈ ಎರಡನ್ನೂ ರಕ್ಷಣೆ ಮಾಡಬೇಕಾಗಿದೆ, ಆದುದರಿಂದ ನಮಗೇ ನಿಮ್ಮ ಓಟು ಕೊಡಿ ಎಂದು ಹೇಳಿದಿರಿ. ಆ ಸಂದರ್ಭದಲ್ಲಿ ಇಂದಿರಾ ಗಾಂಧಿಯವರಿಗೆ ಸಹಸ್ರನಾಮಗಳಿಂದ ಬಿರ್ರಾವಳಿಯನ್ನು ನಿಮ್ಮ ಪಕ್ಷದವರು ಮಾಡಿದ್ದಾರೆ. ಆದುದರಿಂದ ನಾನು ಹೇಳುವುದು ಇಷ್ಟೇ. ನಿಮ್ಮ ಮಂತ್ರಿಮಂಡಲ ಕೇಂದ್ರ ಸರಕಾರದ ಹತ್ತಿರ ಹೋಗಿ ಕಾವೇರಿ ಜಲವನ್ನು, ಬೆಳಗಾವಿ ನೆಲವನ್ನೂ ಉಳಿಸಿಕೊಡುತ್ತೇವೆ ಎಂದು ಯಾವ ಮುಖದಿಂದ ಹೋಗಿ ಪ್ರತಿಪಾದನೆ ಮಾಡಿ ದೇಶವನ್ನು ರಕ್ಷಣೆ ಮಾಡುತ್ತೀರಿ? ಹಣಕಾಸಿನ ವಿಚಾರದಲ್ಲಿ ಬೇಕಾದಷ್ಟು ಅನ್ಯಾಯ ಮಾಡಿದ್ದಾರೆ ಎಂದು ಹೇಳಿದಿರಿ. ನಾನು ನಿಮಗೆ ನೂರಾರು ಉದಾಹರಣೆಗಳನ್ನು ಹೇಳಬಲ್ಲೆ. ಅಷ್ಟೇ ಅಲ್ಲ, ದೇಶದ್ರೋಹ ಮಾಡಿದ್ದಾರೆ ಎಂದು ಹೇಳಿದ ಕೇಂದ್ರ ಸರಕಾರದವರು ಇಲ್ಲಿಯವರೆಗೆ ಮೈನೂರು ರಾಜ್ಯದ ವಿಚಾರದಲ್ಲಿ ಬಹಳ ಹೆಚ್ಚಿನ ಮಮತೆಯನ್ನು ಇಟ್ಟು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸುತ್ತಾ ಬಂದರು. ಆದುದರಿಂದ ನಾನು ಯೋಚನೆ ಮಾಡುತ್ತೇನೆ, ನಿಮ್ಮ ಕಣ್ಣಿಗೆ ಅಲದ ಮರ ಸರಿಯಾಗಿದೆ ಎಂದು ಕಾಣುತ್ತಿದೆ. ಅದರೆ ನಮಗೆ ಗೊತ್ತು. ಅಲದ ಮರ ಏನ ಗಿದೆ ಎಂದರೆ ಒಳಗೆಲ್ಲಾ ನೆತ್ತಲು ಹಿಡಿದು ಮೇಲೆ ಹಸಿರು ಎಲೆ ಕಾಣಿಸುತ್ತಾ ಇವೆ. ಅದು ಊಫ್ ಎಂದು ಗಾಳಿ ಬಂದಾಗ ಬಿದ್ದುಹೋಗುತ್ತದೆ.

ದೇಶದ ಹಿತದೃಷ್ಟಿಯಿಂದ ತಾವು ಇಲ್ಲಿ ಇದ್ದರೆ ಮುಂದೆ ತೊಂದರೆಯಾಗುತ್ತದೆ, ದೇಶದ ಸಮಸ್ಯೆಗಳನ್ನು ಬಿಡಿಸತಕ್ಕ ಶಕ್ತಿಯನ್ನು ನೀವು ಕಳೆದುಕೊಂಡಿದ್ದೀರಿ, ನಿಮ್ಮ ಪಕ್ಷ ಕಳೆದುಕೊಂಡಿದೆ,

ಜನತೆ ನಿಮ್ಮಲ್ಲಿ ವಿಶ್ವಾಸವನ್ನು ಇಟ್ಟಿಲ್ಲ, ಎಲ್ಲರ ಸಮಸ್ಯೆ ಇದು. ಆದ್ದರಿಂದ ಈ ಹಣಕಾಸಿನ ಬಡ್ಜೆಟನ್ನು ಮಂಡಿಸಬೇಡಿ ಎಂದು ಹೇಳುತ್ತೇನೆ, ಇದು ಜನತೆಯ ಬಡ್ಜೆಟ್ ಆಗುವುದಿಲ್ಲ. ಹಿಂದೆ ಒಂದು ರಂಪ್ ಪಾರ್ಲಿಮೆಂಟ್ ಅಂತ ಇತ್ತು, ಆ ರಂಪ್ ಪಾರ್ಲಿಮೆಂಟ್ ಮಂಡಿಸಿದ ಹಾಗೆ ಅಂಕಿಅಂಶಗಳನ್ನು ತಂದು ಇಟ್ಟರೆ ರಿಯಲಿಸ್ಟಿಕ್ ಬಡ್ಜೆಟ್ ಆಗುವುದಿಲ್ಲ. 4 ತಿಂಗಳ ಬಡ್ಜೆಟನ್ನು ಇಡುತ್ತಾರೆ ಎಂದು ಸ್ಪೀಕರ್‌ರವರು ಈಗಾಗಲೇ ಹೇಳಿದರು. 4 ತಿಂಗಳ ಬಡ್ಜೆಟ್ ಮಂಡಿಸಿದರೆ ಬಹುಶಃ 4 ತಿಂಗಳು ಅಲ್ಲ, ಒಂದು ತಿಂಗಳೂ ಸಹ ಅದನ್ನು ಅಡ್ಮಿನಿಸ್ಟರ್ ಮಾಡತಕ್ಕ ಶಕ್ತಿ ನಿಮಗೆ ಇರುವುದಿಲ್ಲ. ಆದ್ದರಿಂದ ಮಾನ್ಯ ಹಿಗಡೆಯವರಲ್ಲಿ ಸವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ—ನಮಗೂ ಗೊತ್ತಿದೆ, ಕಾನ್‌ಸ್ಟಿಟ್ಯೂಷನ್ ಪ್ರಕಾರ ಮಾರ್ಚ್ ಆಖೈರಿನೊಳಗೆ ಈ ಮನೆ ಕೆಲವು ಹಣಕಾಸನ್ನು ಮಂಜೂರಾತಿ ಮಾಡದಿದ್ದರೆ ಕನ್‌ಸಾಲಿಡೇಟೆಡ್ ಫಂಡ್‌ನಿಂದಾಗಲಿ, ಬಾಕಿ ಕಡೆಯಿಂದಾಗಲಿ ಹಣಕಾಸನ್ನು ಖರ್ಚು ಮಾಡುವುದಕ್ಕಾಗುವುದಿಲ್ಲ. ಅದ್ದರಿಂದ ಇಷ್ಟು ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಅದೂ ನಮ್ಮ ಮಾತಿಗೆ ಬೆಲೆ ಕೊಟ್ಟರೆ ಒಂದು ತಿಂಗಳ ಮಟ್ಟಿಗೆ ಮಂಜೂರಾತಿ ಕೊಡೋಣ. ಒಂದು ತಿಂಗಳ ಬಡ್ಜೆಟನ್ನು ಮಾಡಿಕೊಂಡು ಯಾರೇ ನಡೆಸಲಿ, ಅಮೇಲೆ ಸರಿಯಾಗಿ ಕಾನೂನು ಪ್ರಕಾರ ಶಾಸ್ತ್ರೋಕ್ತವಾಗಿ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿಯನ್ನು ವಿಚಾರ ಮಾಡಿಕೊಂಡು ಕೆಲಸ ಮಾಡತಕ್ಕ ಕಾಲ ಬರುತ್ತದೆ. ನೀವು ಆ ಕಾಲ ಬರತಕ್ಕ ಸ್ಥಿತಿಯಲ್ಲಿ ಇರುವುದಿಲ್ಲ, ಜೆನ್ಮಾಗಿ ಅರ್ಥಮಾಡಿಕೊಳ್ಳಿ. ಈಗಿರತಕ್ಕ ಪರಿಸ್ಥಿತಿಯಲ್ಲಿ ಈಗಾಗಲೇ ಮಂತ್ರಿಮಂಡಲ ಬೇಕಾದಷ್ಟು ಇರ್ರೆಗ್ಯೂಲ್ಯಾರಿಟೀಸನ್ನು ಮಾಡಿದೆ. ಒಂದಲ್ಲ, ಎರಡಲ್ಲ, ಅದನ್ನು ಹೇಳಲಿಕ್ಕೆ ಹೋಗಲು ನನಗೆ ಇಚ್ಛೆ ಇಲ್ಲ. ಈ ನಿಲುವಳಿ ಸೂಚನೆಯನ್ನು ತಂದಿರುವ ಉದ್ದೇಶವಾದರೂ ಇಷ್ಟೆ. ಈ ದೇಶದ ಆಡಳಿತವನ್ನು ನಡೆಸತಕ್ಕ ಹಕ್ಕನ್ನು ಸಂಪೂರ್ಣವಾಗಿ ನೀವು ಕಳೆದುಕೊಂಡಿದ್ದೀರಿ. ಜನತೆಗೆ ನಿಮ್ಮಲ್ಲಿ ವಿಶ್ವಾಸವಿಲ್ಲ. ಜನತೆ ನಿಮ್ಮಲ್ಲಿ ಎಲ್ಲಾ ವಿಧವಾದ ಆಶಯಗಳನ್ನೂ ಬಿಟ್ಟಿದ್ದಾರೆ. ಆದ್ದರಿಂದ ಪ್ರಜಾಪ್ರಭುತ್ವ ತತ್ವವನ್ನನುಸರಿಸಿ ನೀವು ಈ ವಾರವೇ ಈ ರೀತಿಯಾದ ಬಡ್ಜೆಟ್ಟನ್ನು ಮಂಡಿಸದೆ ಒಂದು ತಿಂಗಳ ಬಡ್ಜೆಟನ್ನು ಮಾತ್ರ ಮಂಡಿಸಿ ಒಪ್ಪಿಗೆಯನ್ನು ಪಡೆಯಿರಿ. ಅದಕ್ಕೂ ಹೆಚ್ಚಿಗೆ ಮಾಡಿಕೊಂಡು ಹೋದಿರಿ ಎಂದರೆ ಈಗಲೇ ಹೇಳುತ್ತೇನೆ ಮುಂದೆ ಆಗತಕ್ಕ ಭವಿಷ್ಯವನ್ನು ಯಾವ ರೀತಿಯಿಂದಲೂ ಹೇಳಲಿಕ್ಕೆ ಈಗ ನಾನು ಇಚ್ಛೆ ಪಡುವುದಿಲ್ಲ, ಇಷ್ಟು ಮಾತ್ರ ಹೇಳುತ್ತೇನೆ. ನೀವು ಗೌರವಯುತವಾಗಿ ಮನೆಗೆ ಹೋಗುವುದು ಸರಿ. ನಿಮ್ಮ ಪಕ್ಷದಲ್ಲಿರತಕ್ಕ ಇತರ ಮಾನ್ಯ ಸದಸ್ಯರಲ್ಲೂ ಅಧ್ಯಕ್ಷರ ಮುಖೇನ ಸವಿನಯವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ತಪ್ಪು ಜವಾಬ್ದಾರಿಯನ್ನು ಅರಿತವರಾಗಿರುವುದರಿಂದ ತಾವು ಇದನ್ನು ಅರಿತುಕೊಂಡು ಸರ್ಕಾರದವರಿಗೆ ಸಹಾಯ ಮಾಡಿ. ಯಾರೋ ಮಾಡಿದ ಪಾಪಕ್ಕೆ ಯಾರೋ ಭಾಗಿಗಳಾದ ಹಾಗೆ ನೀವೆಲ್ಲರೂ ಆಗಬೇಕಾಗುತ್ತದೆ. ನೀವು ನಮ್ಮ ಸ್ನೇಹಿತರು ಇದ್ದೀರಿ, ನಿಮ್ಮ ವಿಚಾರದಲ್ಲಿ ನಮಗೆ ಅತ್ಯಂತ ವಿಶ್ವಾಸ, ಪ್ರೀತಿ, ಗೌರವ ಇದೆ, ಆದ್ದರಿಂದ ನಾನು ಹೇಳುವುದು ಇಷ್ಟೆ, ಮಾನ್ಯ ಹಣಕಾಸಿನ ಮಂತ್ರಿಗಳು ಈ ಕಡೆಯ ಸದಸ್ಯರ ಇಂಗಿತವನ್ನು ಅರಿತು ಈ ವಿಷಯದಲ್ಲಿ ನನ್ನ ಮಾತಿಗೆ ಬೆಲೆ ಕೊಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಅನೇಕ ಸಾರಿ ಹೇಳುತ್ತೀರಿ ''ಐ ವ್ಯಾಲ್ಯು ಯುವರ್ ವರ್ಡ್ಸ್'' ಎಂದು ಆದ್ದರಿಂದ ನೀವು ಬೆಲೆ ಕೊಡಬೇಕು. ಒಂದು ಮಾತು ಹೇಳುತ್ತೇನೆ, ನೀವು ಸಂಯುಕ್ತ ರಂಗ ರಚನೆ ಮಾಡಿಕೊಂಡಿದ್ದೀರಲ್ಲಾ ಅದರಲ್ಲಿರತಕ್ಕ ಜನಸಂಘದ ಮಾನ್ಯ ಸದಸ್ಯರಾದ ಶ್ರೀಮಾನ್ ಮುಳ್ಳೂರು ಆನಂದರಾಯರು ಮೇಲ್ಮನೆಯಲ್ಲಿ ಡಿಸೆಂಬರ್ ಅಧಿವೇಶನದಲ್ಲಿ ಒಂದು ಭಾಷಣ ಮಾಡಿದರು, ಅದನ್ನು ಓದುತ್ತೇನೆ. ಒಂದು ವಿಷಯ ಅದರಲ್ಲಿ ಬಹಳ ಮುಖ್ಯವಾಗಿದೆ; ಅದು ಈ ರೀತಿ ಇದೆ.—

> ''ಇನ್ನೊಂದು ಕಾಂಗ್ರೆಸ್ ಇಂದು ಪೂರ್ಣವಾಗಿ ಸತ್ತುಹೋಗಿದೆ, ಉಳಿದಿಲ್ಲ. ಆದರಿಂದ ಜನತೆಗೆ ದುಃಖವಿಲ್ಲ. ಕಾಂಗ್ರೆಸ್ ಸತ್ತುಹೋಗಿ ಸಮಾಧಿಯಾಗಿ ಕರ್ಮ ಮುಗಿದಿದೆ. ಇನ್ನೊಂದು ವಿಚಿತ್ರ ಪರಿಸ್ಥಿತಿ ಇದೆ, ಪೀರಶೈವರಲ್ಲಿ ಒಂದು ಪದ್ಧತಿಯಿದೆ, ಯಾರಾದರೂ ಸತ್ತರೆ ಸಮಾಧಿ ಮಾಡಿ ಅದರ ಮೇಲೆ ಲಿಂಗವನ್ನು ಪ್ರತಿಷ್ಠೆ ಮಾಡುವರು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷರಾದ ದಿವಸವೇ ಸತ್ತುಹೋಯಿತು. ಅದರ ಮೇಲೆ ನಿಜಲಿಂಗವನ್ನು ಸ್ಥಾಪನೆ ಮಾಡಿದರು. ಸ್ಥಾಯುವುದಕ್ಕೆ ಮುಂಚೆ ಅನುಖವಿದ್ದರೆ ಸತ್ತಮೇಲೆ ಭೂತವಾಗುವುದು. ಕಾಂಗ್ರೆಸ್ಸಿಗೆ ತುಂಬಾ ಅಧಿಕಾರ ಲಾಲಸೆ ಇದೆ, ಆದುದರಿಂದ ಅದು ಸತ್ತರೂ ಅಧಿಕಾರ ಬಿಟ್ಟು ಹೋಗಲು ಮನಸ್ಸಿಲ್ಲ. ಆದುದರಿಂದ ಅದು ಸಮಾಧಿಯಾದ ಮೇಲೆ ಭೂತದ ರೂಪದಲ್ಲಿ ಓಡಾಡುತ್ತಿದೆ, ಅದು ಕಿರುಕುಳ ಕೊಡುವುದನ್ನು ತಡೆಯುವುದು ಅಸಾಧ್ಯವಾಗಿದೆ. ಇನ್ನೊಂದು ದುಃಖದ ಸಂಗತಿ ಹೇಳುತ್ತೇನೆ. ಕೆಲವು ಸಮಯ ಭೂತ ಮೋಹಿನಿ ರೂಪವನ್ನು ಧರಿಸುವುದು, ಅದು ನೋಡುವುದಕ್ಕೆ ಸುಂದರವಾಗಿರುವುದು, ಅದನ್ನು

(ಶ್ರೀ ಎಚ್. ಸಿದ್ದವೀರಪ್ಪ)

ನೋಡಿ ಅನೇಕರು ಮೋಹಪರವಶರಾಗಿ ತಬ್ಬಿಕೊಳ್ಳುವರು. ಪ್ರೇಮದಿಂದ ಹಾಗೆ ತಬ್ಬಿಕೊಂಡಾಗ ಭೂತವು ರಕ್ತವನ್ನು ಹೀರಿಬಿಡುವುದು. ಮೋಹಿನಿ ರೂಪ ತಾಳಿದಾಗ ಅದು ಸುಂದರವಾಗಿ ಕಂಡರೂ ಕರಾಳವಾಗಿರುವುದು. ಶ್ರೀ ವೀರೇಂದ್ರಪಾಟೀಲರು ಅಥವಾ ಇತರರು ಯಾರು ಕಾಂಗ್ರೆಸ್ ಪಕ್ಷಕ್ಕೆ ಸೇರಿರುವರೋ ಅವರು ಈಗ ಭೂತದಿಂದ ಬಿಡುಗಡೆ ಹೊಂದಿ ಸುರಕ್ಷಿತವಾಗಿರಲಿ. ಭೂತದಿಂದ ಅವರು ತೊಂದರೆಗೀಡಾಗುವುದು ಬೇಡ. ಶ್ರೀವೀರೇಂದ್ರಪಾಟೀಲರು ಪರಿಸ್ಥಿತಿ ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ ವರ್ತಿಸಿದ್ದಿರೆ ಗಡಿ ಸಮಸ್ಯೆಯೇನಿದೆ ಅದು ಬಗೆಹರಿಯುತ್ತಿತ್ತು. ಅದಕ್ಕೆ ಈಗಲೂ ಅವರು ಪ್ರಯತ್ನಮಾಡಬಹುದು. ಇನ್ನೂ ಕಾಲ ಮಿಂಚಿಹೋಗಿಲ್ಲ, ಒಳ್ಳೆಯ ಕಾಲ, ಚುನಾವಣೆ ಕಾಲ ಬಂದಿದೆ...''

ಈ ರೀತಿ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಆದ್ದರಿಂದ ನಾನಿವತ್ತು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ಮಾನ್ಯ ಹಣಕಾಸಿನ ಮಂತ್ರಿಗಳು ಪರಿಸ್ಥಿತಿಯನ್ನು ಚೆನ್ನಾಗಿ ವಿಚಾರ ಮಾಡಿರಿ, ನೀವು ಪ್ರಪಂಚದ ಪರ್ಯಟನೆ ಮಾಡಿದ್ದೀರಿ, ದೇಶಗಳನ್ನೆಲ್ಲಾ ನೋಡಿದ್ದೀರಿ, ನಿಮ್ಮ ಮನಸ್ಸಿಗೆ ಇದು ಒಪ್ಪುವುದಿಲ್ಲ. ವಿಧಿ ಬರೆದಂತಹ ಬರಹವನ್ನು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಯನ್ನು ಮಂಡಿಸಲು ಸಭೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ನಾನು ಹೆಚ್ಚು ಸಮಯ ತೆಗೆದು ಕೊಳ್ಳುವುದಿಲ್ಲ. ಈ ದಿವನ ನಮ್ಮ ಎದುರಿಗಿರುವ ನಿಲುವಳಿ ಸೂಚನೆಯನ್ನು ರಾಜ್ಯದ ಹಿತದೃಷ್ಟಿಯಿಂದ ಮತ್ತು ಈ ಸಭೆಯ ಹಿತದೃಷ್ಟಿಯಿಂದ ಒಪ್ಪಿಕೊಳ್ಳುವುದು ಅವಶ್ಯವಾಗಿದೆ. ಪ್ರಾಮುಖ್ಯವಾಗಿ ಬಜೆಟ್ಟನ್ನು ಯಾರು ಮಂಡಿಸಬೇಕು ಎಂದರೆ ಯಾರು ಜನರ ವಿಶ್ವಾಸವನ್ನು ಪಡೆದು ಅವರ ಹಿತ ಸಾಧಿಸಲಿದ್ದಾರೆ ಅವರು ಮಂಡಿಸಬೇಕು. ಈ ಸರಕಾರದವರು ಮೊನ್ನೆ ನಡೆದ ಲೋಕಸಭೆಯ ಚುನಾವಣೆಯಲ್ಲಿ ಜನರ ವಿಶ್ವಾಸವನ್ನು ಕಳೆದುಕೊಂಡಿರುವರೆಂಬುದು ವ್ಯಕ್ತವಾಗಿದೆ. ಅಲ್ಲದೆ ಅವರ ನೀತಿ ಮತ್ತು ಕಾರ್ಯಕ್ರಮಗಳೇ ಒಂದು ರೀತಿ ಇದ್ದು ಮುಂದೆ ಬರುವ ಸರಕಾರದ ನೀತಿ ಮತ್ತು ಕಾರ್ಯಕ್ರಮಗಳು ಬೇರೆ ರೀತಿಯಾಗಬಹುದು. ಈ ಸರಕಾರ ಜನತೆಯ ಮನ್ನಣೆಯನ್ನು ಪಡೆದಿಲ್ಲದಿರುವುದರಿಂದ ಇದು ಬಜೆಟ್ಟನ್ನು ಮಂಡಿಸಿದರೆ ಇದರಿಂದ ಜನರ ಕಲ್ಯಾಣವಾಗುವುದಿಲ್ಲ. ಈಗ ಕೇಂದ್ರ ಸರಕಾರದಲ್ಲಿ ಯಾವ ರೀತಿಯ ಯೋಜನೆಗಳಿವೆ ಅದೇ ರೀತಿಯಲ್ಲಿ ಇಲ್ಲೂ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರಬೇಕಾಗಿದೆ. ಈಗ ಚುನಾವಣೆಯಲ್ಲಿ ಜನರು ತಮ್ಮ ವರ್ಡಿಕ್ಟನ್ನು ಕೊಟ್ಟಿದ್ದಾರೆ. ಅದಕ್ಕನುಸಾರವಾಗಿ ಸಮಾಜವಾದವನ್ನು ಕಾರ್ಯರೂಪಕ್ಕೆ ತರಲು ಬಡವರಿಗೆ ಮನೆಗಳನ್ನು ಕಟ್ಟಿ ಕೊಡುವುದು, ಶ್ರೀಮಂತಿಕೆಗೆ ತಡೆ ಹಾಕುವುದು, ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸುವುದು ಮುಂತಾದ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. ಇದಕ್ಕೆ ತಕ್ಕ ಅವಕಾಶವನ್ನು ಬಜೆಟ್ಟಿನಲ್ಲಿ ಕಲ್ಪಿಸಬೇಕಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ಸರಿಯಾದ ನೀತಿಯಿಲ್ಲ, ಸರಕಾರ ಭ್ರಷ್ಟಾಚಾರದಿಂದ ಕೂಡಿದೆ, ಹರಿಜನರ ಉದ್ಧಾರ ಮಾಡಿಲ್ಲ. ಇದಕ್ಕಾಗಿ ಜನತೆ ಈ ಸರಕಾರ ಬೇಡವೆಂದು ಚುನಾಣೆಯಲ್ಲಿ ತಿಳಿಸಿದ್ದಾರೆ. ಇಂದು ಬಜೆಟ್ಟನ್ನು ಮಂಡಿಸಲೇ ಬೇಕೆಂದು ಸರಕಾರ ಹಟ ಹಿಡಿದಿರುವಾಗ ನಾನು ಅಧ್ಯಕ್ಷರ ಕೈ ಬಲಪಡಿಸಬೇಕೆಂದಿದ್ದೇನೆ. ಅಸ್ಸೋ ಅಲ್ಲ, ಬಜೆಟ್ ಮಂಡಿಸಲು ಏಕೆ ಇಷ್ಟು ಆತುರ? ಆತುರವಿಲ್ಲ, ಅನಿವಾರ್ಯ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಬಜೆಟ್ ಅಧಿವೇಶನ ಮುಂಜೆಯೇ ಕೆರೆಯಲು ಅವಕಾಶವಿರಲಲ್ಲವೆಂದು ಹೇಳಿದರು. ಪತ್ರಿಕೆಯಲ್ಲಿ ಬಂದಿರುವಂತೆ ರಾಜಯ್ಯನವರಿಗೆ ಹಣ ಹಂಚಲು ಕೊಟ್ಟಿದ್ದಾರೆ, ಕಂಟ್ರಾಕ್ಟರುಗಳಿಂದ ಹಣ ಪಡೆದಿರುವುದರಿಂದ ಅವರಿಗೆ ಬೇಕಾದ ಕೆಲಸಗಳನ್ನು ಕೊಡಲು ಬಜೆಟ್ಟಿನಲ್ಲಿ ಅವಕಾಶ ಮಾಡಿಕೊಳ್ಳಬೇಕಾಗಿದೆ, ವಿದ್ಯುಚ್ಛಕ್ತಿ ಸರಬರಾಯಿ ಮಾಡುವಾಗ ಒಂದು ಲಕ್ಷ ತೆಗೆದು ಕೊಂಡು ಆರು ಲಕ್ಷದ ಅವಕಾಶ ಮಾಡಿಕೊಟ್ಟಿದ್ದಾರೆ. ''ಬೆಂದಮನೆಗೆ ಹಿರಿದದ್ದೇ ಲಾಭ'' ಎಂಬಂತೆ ಇದನ್ನೆಲ್ಲಾ ಮುಚ್ಚಿಕೊಳ್ಳಲು ತಮಗೆ ಬೇಕಾದಂತೆ ಬಜೆಟ್ ಮಾಡಲು ಹೊರಟಿದ್ದಾರೆ. ಲೋಕಸಭೆಗೆ ಚುನಾವಣೆ ನಡೆದಿದೆ, ಅಸೆಂಬ್ಲಿ ಚುನಾವಣೆ ನಡೆದಿಲ್ಲ, ಎಂದು ಹೇಳಬಹುದು. ಅದರೆ ಜನತೆ ತಮ್ಮ ಒಲವು ಯಾರ ಕಡೆಗಿದೆ ಎಂಬುದನ್ನು ತೋರಿಸಿದೆ, ವರ್ಡಿಕ್ಟ್ ಕೊಟ್ಟಿದೆ. ಇಂದಿರಾಗಾಂಧಿಯವರು ತಮ್ಮ ಹಿತವನ್ನು ಸಾಧಿಸುವರು, ಆದುದರಿಂದ ಅವರ ಸರಕಾರವೇ ಇರಬೇಕು ಎಂಬ ಅಭಿಪ್ರಾಯ ಸೂಚಿಸಿದೆ. ಆದಕ್ಕಾಗಿ ಅವರ ಪಕ್ಷಕ್ಕೇ ಮತ ಕೊಟ್ಟಿದೆ. ಆ ದೃಷ್ಟಿಯಿಂದ ಈ ಸರಕಾರಕ್ಕೆ ನೈತಿಕ ಬಲವಿಲ್ಲ. ಮಾನ್ಯ ಚನ್ನಬಸಪ್ಪನವರು ಮಂತ್ರಿ ಮಂಡಲದಮೇಲೆ ನೂಚನೆಯನ್ನು ತಂದಿದ್ದಾರೆ. ಎಲ್ಲ ಮಂತ್ರಿಗಳ ಮೇಲೆ ಟೀಕೆ ಮಾಡುವುದು ಅನಾವಶ್ಯಕ. ಮೊಳ್ಳಿಗೇರಿ

ಯವರು ಸೋತರೆ ರಾಜೀನಾಮೆ ಕೊಡುವುದಾಗಿ ನಾಡಗೌಡರು ಹೇಳಿದ್ದರು. ಅವರು ಕೊಟ್ಟರೆ ಬೇಕೆಂದು ನಾನು ಭಾವಿಸುತ್ತೇನೆ. ದೊಡ್ಡಮೇಟಿಯವರು ತತ್ವನಿಷ್ಠರು, ಆದುದರಿಂದ ಅವರೂ ರಾಜೀನಾಮೆ ಕೊಟ್ಟಿರಬಹುದೆಂದು ವರದಿಯಾಗಿದೆ. ಹಣಕಾಸಿನ ಸಚಿವರು ಪಜಾಪ್ರಭುತ್ವದಲ್ಲಿ ಬಹಳ ನಂಬಿಕೆ ಇರುವವರು, ಅವರೇನು ಮಾಡುವರೋ ನೋಡಬಹುದು. ದೇಶದ ಹಣ ಲೂಟಿಯಾಗುತ್ತಿದೆ. ಇದನ್ನೆಲ್ಲಾ ಗಮನಿಸಿ ರಾಜ್ಯದ ಮತ್ತು ದೇಶದ ಹಿತದೃಷ್ಟಿಯಿಂದ ಈ ಸೂಚನೆಗೆ ಅವಕಾಶ ಕೊಡಬೇಕೆಂದು ಹೇಳಿ ಇದಕ್ಕೆ ಬೆಂಬಲ ಕೊಡುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಈಗ 50 ನೆಯ ರೂಲ್ ಪ್ರಕಾರ ತಮಗೆ ನೋಟೀಸ್ ಕಳಿಸಿದ್ದೇವೆ. ಮುಖ್ಯವಾಗಿ 52 ರ ಪ್ರಕಾರ ನೋಟೀಸ್ ಕಳಿಸಬೇಕಾಗಿತ್ತು. ಪರಿಸ್ಥಿತಿಯನ್ನು ಕುರಿತು ಚರ್ಚೆನಬೇಕೆಂದು ಸೂಚಿಸಿದೆ, ಸಭೆಯು ಮುಂದಿರುವ ಬೇರೆ ಕಾರ್ಯಕಲಾಪಗಳನ್ನು ತಳ್ಳಿ ಈ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥನೆ ಸಲ್ಲಿಸಿದ್ದಾರೆ. ಇದರ ಚರ್ಚೆಗೆ ಅವಶ್ಯಕತೆ ಇದೆಯೇ? ಬೇರೆ ಕಾರ್ಯಕಲಾಪಗಳನ್ನು ಬದಿಗಿಟ್ಟು ನಿಲುವಳಿ ಸೂಚನೆಯಲ್ಲಿರುವ ವಿಚಾರ ಚರ್ಚೆಮಾಡುವುದು ಸೂಕ್ತವೆ? ಎಂಬುದನ್ನು ತಮಗೆ ಮನವರಿಕೆ ಮಾಡಿಕೊಡಬೇಕಾಗಿದೆ. ವಾಸ್ತವವಾಗಿ ಇಂದು ವಿಶೇಷ ಪರಿಸ್ಥಿತಿ ಇದೆ, ಇದಕ್ಕಿಂತ ಪ್ರಾಮುಖ್ಯವಾದುದು ಹಿಂದೆ ಬಂದಿಲ್ಲ, ಮುಂದೆ ಬರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಬಹುಶಃ ತಾವು ಇದನ್ನು ನಂಬುತ್ತೀರಿ. ಪ್ರಜಾಸತ್ತೆಯಲ್ಲಿ ನಂಬಿಕೆ ಇರುವವರೆಲ್ಲರೂ ಈ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲು ಬೆಂಬಲ ಕೊಡುವರು. ಈ ಪರಿಸ್ಥಿತಿ ಬಾರದಂತೆ ಮಾಡಲು ಅವಕಾಶವಿತ್ತು. ಚುನಾವಣಾ ಸಮಯದಲ್ಲಿ ವೀರೇಂದ್ರಪಾಟೀಲರು ಜಲ ಮತ್ತು ನೆಲದ ಪ್ರಶ್ನೆಯಲ್ಲಿ ನಮಗೆ ಅನುಕೂಲವಾಗಬೇಕಾದರೆ ನಮ್ಮ ಪಕ್ಷಕ್ಕೆ ಓಟು ಕೊಡಿ ಎಂದು ಪ್ರಚಾರವನ್ನು ಬಹಳವಾಗಿ ಮಾಡಿದರು, ದಿನ ಪತ್ರಿಕೆಗಳಲ್ಲಿ ಇದು ಪ್ರಕಟವಾಗಿತ್ತು. ರಾಜ್ಯದಲ್ಲಿ ಈ ಪರಿಸ್ಥಿತಿ ಏಕೆ ಬಂತು ಎಂಬುದನ್ನು ಗಮನಿಸಬೇಕು. ಲೋಕಸಭೆಯು ಚುನಾವಣೆಯಲ್ಲಿ, ಈ ಸರಕಾರ ಮಾಡಿರುವುದು ಸರಿಯಲ್ಲವೆಂದು ತೀರ್ಮಾನಿಸಲು ತಮಗೆ ವಿರುದ್ಧವಾಗಿ ಓಟು ಮಾಡಿದ್ದಾರೆ.

5-00 P.M.

ಇಲ್ಲಿ ಸಾಮಾನ್ಯವಾದ ಪರಿಸ್ಥಿತಿ ಇಲ್ಲ. ಈಚೆಗೆ ನಡೆದ ಚುನಾವಣೆ ಲೋಕಸಭೆಯ ಚುನಾವಣೆ ಮಟ್ಟಕ್ಕೆ ನಿಂತುಕೊಳ್ಳಲಿಲ್ಲ. ರಾಜ್ಯದ ಆಡಳಿತವನ್ನು ನಡೆಸುತ್ತಿರುವ ಮುಖ್ಯ ಮಂತ್ರಿಗಳು ನನ್ನ ಪಕ್ಷ, ನನ್ನ ತತ್ವ, ನನಗೋಸ್ಕರ ಓಟು ಕೊಡಿ ಎಂದು ಕೇಳಿ ಜನತೆ ಅದನ್ನು ಒಪ್ಪುವುದೇ ಬಿಡುವುದೇ ಎನ್ನುವ ಮಟ್ಟಕ್ಕೆ ಈ ಚುನಾವಣೆಯನ್ನು ತೆಗೆದುಕೊಂಡು ಹೋದರು. ರಾಜ್ಯದ ಜನತೆಯ ಮುಂದೆ ರೆಫರೆಂಡಂ ಇಟ್ಟ ರೀತಿಯಲ್ಲಿ ಈ ಚುನಾವಣೆಗಳನ್ನು ನಡೆಸಿಕೊಂಡು ಬಂದರು. ಈಗಿನ ಮುಖ್ಯ ಮಂತ್ರಿಗಳಲ್ಲಿ ನಮಗೆ ನಂಬಿಕೆ ಇಲ್ಲ, ರಾಜ್ಯಕ್ಕೆ ಅನುಕೂಲವಾಗುವಂಥ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಹಾಯಕವಾಗುವಂಥ ರೀತಿನೀತಿಗಳನ್ನು ರೂಪಿಸಿಲ್ಲ, ಅವರು ಅಧಿಕಾರದಲ್ಲಿರುವುದಕ್ಕೆ ಲಾಯಖ್ ಅಲ್ಲ ಎನ್ನುವ ತೀರ್ಮಾನವನ್ನು ಜನತೆ ಕೊಟ್ಟಿದೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಎಂದು ಭಾವನೆ ಮಾಡಿದರೆ ಅವರು ಈ ಸಭೆಯಲ್ಲಿ ಬಹುಮತವಿದೆ ಎಂದು ಹುಚ್ಚುಮಾರಿಗಳಾಗಿ ಪ್ರಜಾಪ್ರಭುತ್ವದಲ್ಲಿ ಜನತೆಯು ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡುವುದು ಬೇಡ ಎನ್ನುವ ತಪ್ಪೋರ ನೀತಿಯನ್ನು ಅನುಸರಿಸಿಕೊಂಡು ಅಧಿಕಾರದಲ್ಲಿ ಉಳಿಯುವುದರಲ್ಲಿ ಏನೂ ಅರ್ಥವಿಲ್ಲ. ಅವರಿಗೆ ಬಹುಮತವಿದೆ, ಅವನ್ನು ಉಳಿಸಿಕೊಂಡಿದ್ದೇವೆ ಎನ್ನುವುದಾದರೆ ಅವರು ಬಂದು ತೀರ್ಮಾನವನ್ನು ತೆಗೆದುಕೊಂಡು ವಿಧಾನ ಸಭೆಯನ್ನು ವಿಸರ್ಜಿಸಿ ಹೊಸದಾಗಿ ಮ್ಯಾಂಡೇಟ್ ಕೇಳುತ್ತೇವೆ ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ, ಜನತೆ ನನ್ನ ಪಕ್ಷದಲ್ಲಿಲ್ಲ, ನನ್ನ ಪಕ್ಷದಲ್ಲಿರುವವರ ಬಲ ಇಲ್ಲ ಎನ್ನುವ ಅನುಮಾನವಿದ್ದರೆ ಅವರು ತಮ್ಮ ಮಂತ್ರಿಗಳ ಸಮೇತ ತಮ್ಮ ಸ್ಥಾನಮಾನಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದರೆ ಈ ಪರಿಸ್ಥಿತಿ ಈ ಹೊತ್ತು ಬರುತ್ತಿರಲಿಲ್ಲ, ಅವರು ಅಧಿಕಾರಕ್ಕೆ ಅಂಟಿಕೊಂಡು ಕುಳಿತುಕೊಳ್ಳತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಜನತೆಯ ಅಭಿಪ್ರಾಯ ಅವರಿಗೆ ವಿರೋಧವಾಗಿರುವುದರಿಂದ, ರಾಜ್ಯದ ಜನತೆಯ ಪರವಾಗಿ ಆಡಳಿತ ನಡೆಸತಕ್ಕ ಧೈರ್ಯ, ಸ್ಥೈರ್ಯ, ನೈತಿಕವಾದ ಹಕ್ಕು ಅವರಿಗೆ ಬರುವುದಿಲ್ಲ. ಪ್ರಜೆಗಳ ಅಭಿಪ್ರಾಯವನ್ನು ಅರ್ಥ ಮಾಡಿಕೊಂಡು ಅದರಂತೆ ತೀರ್ಮಾನ ಕೈಗೊಳ್ಳುವುದರಲ್ಲಿ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿ ಮಂಡಲದವರೂ ವಿಫಲರಾಗಿದ್ದಾರೆಂದು ಈ ಸಭೆ ಈ ವಿಷಯವನ್ನು ಚರ್ಚೆ ಮಾಡಬೇಕಾಗುತ್ತದೆ.

ತಾವೇನಾದರೂ ಈ ಮಂತ್ರಿಮಂಡಲ ನೈತಿಕವಾಗಿ, ಧಾರ್ಮಿಕವಾಗಿ ಇರುವುದಕ್ಕೆ ಹಕ್ಕಿಲ್ಲ, ಜನತೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ ಅಧಿಕಾರದಲ್ಲಿರುವುದಕ್ಕೆ ಹಕ್ಕಿಲ್ಲ ಎನ್ನುವ

(ಶ್ರೀ ಎಚ್. ಎನ್. ನಂಜೇಗೌಡ)

ತೀರ್ಮಾನವನ್ನು ಕೈಕೊಂಡು ಚರಿತ್ರೆಯನು ಬರೆಯುವಂಥ ಸ್ಪೀಕರ್ ಆಗುತ್ತೀನೆ ಎನ್ನುವ ಮನಸ್ಸುಮಾಡಿ, ನಿಮ್ಮನ್ನು ಮಂತ್ರಿಗಳಾಗಿ ನಾನು ರೆಕಗ್ನೈಸ್ ಮಾಡುವುದಿಲ್ಲ, ಜನತೆಯ ಅಭಿಪ್ರಾಯ ನಿಮಗೆ ವಿರೋಧವಾಗಿದೆ, ನೀವು ಜೈಜರಿ ಬೆಂಚುಗಳಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಹೇಳುವ ಮನಸ್ಸು ಮಾಡಿದರೆ ಈ ಸೂಚನೆಯನ್ನು ಚರ್ಚೆ ಮಾಡಬೇಕಾದ್ದಿಲ್ಲ: ಇದನ್ನು ವಾಪಸು ತೆಗೆದುಕೊಳ್ಳುತ್ತೀವೆ. ಪ್ರಜಾ ನತ್ತೆಯಲ್ಲಿ ಈ ಸಭೆಗೆ ಸಂಬಂಧಪಟ್ಟ ಹಾಗೆ ತಾವು ದೊಡ್ಡವರು. ಸಭೆಗೆ ಕರ್ತವ್ಯಗಳನ್ನು ಹೇಳುವುದರ ಜೊತೆಗೆ, ಸಭೆಯನ್ನು ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗುವುದರ ಜೊತೆಗೆ, ಪ್ರಜಾಸತ್ತೆಯನ್ನು ರಕ್ಷಣೆ ಮಾಡತಕ್ಕ ಭಾರ ಈ ಸಭೆಯಲ್ಲಿ ಎಲ್ಲರಿಗಿಂತ ಹೆಚ್ಚಾಗಿ ತಮಗೆ ಇದೆ. ರೆಫರೆಂಡು ಎನ್ನುವ ಮಟ್ಟದಲ್ಲಿ ನೆಲ, ಜಲ ವಿವಾದವನ್ನೆತ್ತಿಕೊಂಡು ನಮ್ಮ ಸರ್ಕಾರಕ್ಕೆ ಓಟು ಕೊಡಿ ಎಂದು ಹೇಳಿರುವುದರ ಜೊತೆಗೆ ಬೇಕಾದಷ್ಟು ಮಾಡಿದರು.

ಹೇಮಾವತಿ ವಿಷಯದಲ್ಲಿ ಟೆಂಡರ್ ಕರೆಯದೆ 120 ಲಕ್ಷ ರೂಪಾಯಿ ಕೆಲಸವನ್ನು ಮೈನ್ ಸ್ಟೂಯಿಸ್ ಕೆಲಸವನ್ನು ಪೀಸ್ ರೇಟ್ ಮೇಲೆ ಕೊಟ್ಟರು. ಅದರಲ್ಲಿ ಹೊಡೆದ ಕಮಿಷನ್ ಚುನಾವಣೆಗೆ ಹಾಕಿದ್ದಾರೆ, ಮನೆಗೆ ತೆಗೆದುಕೊಂಡು ಹೋಗಲಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ್, ಅವರ ಹೆಸರು ಹೇಳುವುದಿಲ್ಲ, ಅವರ ಬರವಣಿಗೆಯಲ್ಲಿರುವ ಒಂದು ಪತ್ರ ನನ್ನ ಹತ್ತಿರ ಬಂದಿದೆ. ಮುಖ್ಯ ಮಂತ್ರಿಗಳಿಗೆ ಕಳುಹಿಸುವುದಕ್ಕೆ ಬೇಕಾದ ಹಣ ಇಂಥ ಕಂಟ್ರಾಕ್ಟರನಿಂದ 2,67,000 ರೂಪಾಯಿ ಗಳು ಎಂದು ಬರೆದಿರುವ ಪತ್ರ ನನ್ನ ಕೈಗೆ ಬಂದಿದೆ. ಕೆಲಸವನ್ನು ಕಂಟ್ರಾಕ್ಟರಿಗೆ ಕಡಮೆ ರೇಟಿಗೆ ಕೊಡಬೇಕಾದುದನ್ನು ಎಸ್ಟಿಮೇಟ್ ಕಾಸ್ಟಿಗಿಂತ 15 ಪರ್ಸೆಂಟ್, 25 ಪರ್ಸೆಂಟ್ ಜಾಸ್ತಿ ಮಾಡಿ ಕೊಟ್ಟಿದ್ದಾರೆ. ಇಷ್ಟೆಲ್ಲ ಗವರ್ನರ್ ದರ್ಬಾರ್ ಮಾಡಿದರೂ ಕುರುಕ್ಷೇತ್ರದಲ್ಲಿ ಹತರಾದರು, ನೀವು ಅಧಿಕಾರದಲ್ಲಿರುವುದಕ್ಕೆ ಅರ್ಹರಲ್ಲ, ನಿಮ್ಮ ಅಡಳಿತ ಕ್ರಮವನ್ನು ಒಪ್ಪುವುದಿಲ್ಲ, ನಮ್ಮ ಹಿತ ಕಾಪಾಡು ವುದಕ್ಕೆ ನಿಮಗೆ ಶಕ್ತಿ ಇಲ್ಲ ಎನ್ನುವ ತೀರ್ಮಾನವನ್ನು ಜನತೆ ಕೈಕೊಂಡು, ಅವರ ಪಕ್ಷದ ಅಭ್ಯರ್ಥಿ ಗಳಿಗೆ ವಿರೋಧವಾದ ಮತವನ್ನು ಜನತೆ ಕೊಟ್ಟಿರುವುದರ ಪ್ರಯುಕ್ತ ಒಂದು ವಿಶೇಷವಾದ ಪರಿಸ್ಥಿತಿ ಉಂಟಾಗಿ ಈ ಹೊತ್ತು ಅವರು ಇಲ್ಲಿ ಕುಳಿತುಕೊಂಡು ರಾಜ್ಯದಲ್ಲಿ ಅಡಳಿತ ನಡೆಸುತ್ತೀವೆ, ಅಯವ್ಯಯವನ್ನು ಮಂಡನೆ ಮಾಡುತ್ತೀವೆ ಎಂದು ಕುಳಿತುಕೊಳ್ಳತಕ್ಕುದು ಯೋಗ್ಯವೇ ಅಲ್ಲವೇ ಎನ್ನುವುದನ್ನು ನಾವು ಚರ್ಚೆ ಮಾಡಬೇಕಾಗಿದೆ. ಇದಕ್ಕೆ ಮುಂಚೆ ಅಧಿಕಾರದಲ್ಲಿರುವುದಕ್ಕೆ ನೀವು ಅರ್ಹರಲ್ಲ, ಅಧಿಕಾರವನ್ನು ನೀವಾಗಿಯೇ ಬಿಡುತ್ತೀರಿ ಎನ್ನುವ ಕ್ಲಾರಿಫಿಕೇಷನ್ ಕೇಳುತ್ತೀನೆ. ಅವರು ಒಪ್ಪಿಕೊಂಡರೆ ಚರ್ಚೆ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಮುಖ್ಯ ಮಂತ್ರಿಗಳಾಗಿರು ವುದಕ್ಕೆ, ಮಂತ್ರಿಗಳಾಗಿರುವುದಕ್ಕೆ ಅಧಿಕಾರವಿಲ್ಲ ಎನ್ನುವ ತೀರ್ಮಾನವನ್ನು ಅವರೇ ತೆಗೆದು ಕೊಂಡರೆ ಧರ್ಮ. ಶ್ರೀ ಬ್ಯಾನರ್ಜಿ ಅವರು ಬಂಗಾಳದಲ್ಲಿ ಮಾಡಿದ ಹಾಗೆ ಜನತೆಯ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು, ಈ ಸಭೆಗೆ ಶ್ರಮ ಕೊಡದೆ, ನಿಮ್ಮನ್ನು ಮುಖ್ಯ ಮಂತ್ರಿಗಳಾಗಿ ರಿಕಗ್ನೈಸ್ ಮಾಡುವುದಿಲ್ಲ ಎಂದು ತಾವು ಅವರಿಗೆ ಹೇಳಿದರೆ ನಾವು ತಮಗೆ ಚಿರಋಣಿಗಳಾಗಿರುತ್ತೀವೆ. ತಮ್ಮನ್ನು ದೊಡ್ಡ ಲಾರಿಯಲ್ಲಿ ಎತ್ತರದಲ್ಲಿ ಕೂಡಿಸಿ ಮೆರವಣಿಗೆ ಮಾಡುತ್ತೀವೆ, ಹಾರ ತುರಾಯಿ ಹಾಕಿ ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡಿದ ಧೀರರು ಎಂದು ಹೊಗಳುತ್ತೀವೆ. ಆದುದರಿಂದ ತಾವು ಜನರ ಮೆಚ್ಚುಗೆಗೆ, ಪ್ರಜಾಸತ್ತೆಯ ಉಳಿವಿಗೆ ಪಾತ್ರರಾಗತಕ್ಕ ಕ್ರಮವನ್ನು ಕೈಕೊಂಡು ಈ ಮಂತ್ರಿಮಂಡಲವನ್ನು ನಾನು ರೆಕಗ್ನೈಸ್ ಮಾಡುವುದಿಲ್ಲ, ಹಣಕಾಸಿನ ಮಂತ್ರಿಗಳನ್ನು ರೆಕಗ್ನೈಸ್ ಮಾಡುವುದಿಲ್ಲ, ಎಂದು ನೇರಳೆ ಅಯವ್ಯಯವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡಬಾರದು. ಆ ರೀತಿಯ ಕ್ರಮ ತೆಗೆದುಕೊಳ್ಳತಕ್ಕ ಸಹೃದಯತೆ ತಮ್ಮಲ್ಲಿ ಇಲ್ಲದೆ ಹೋದರೆ, ಧಿಟ್ಟ ಕ್ರಮ ತೆಗೆದುಕೊಳ್ಳುವುದಕ್ಕೆ ಭಗವಂತನು ಶಕ್ತಿ ಕೊಡದೆ ಹೋದರೆ, ಏನು ಪರಿಸ್ಥಿತಿ ಇಂದು ಉದ್ಭವವಾಗಿದೆ ಅದರ ಬಗ್ಗೆ ಚರ್ಚೆ ಮಾಡಿ ಸಭೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ. ಇದು ಬಡ್ಜೆಟ್ ಮಂಡಿಸಿದ ಮೇಲೆ ತೆಗೆದುಕೊಳ್ಳತಕ್ಕ ಕ್ರಮವಲ್ಲ, ಬಜೆಟ್ ಮಂಡನೆಯಾದ ಮೇಲೆ ಚರ್ಚೆ ಮಾಡುವ ವಿಷಯವೂ ಅಲ್ಲ. ಆದುದರಿಂದ ತಮ್ಮಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತೀನೆ. ತಾವು ಈ ಹೊತ್ತು ಈ ಸಭೆಯಲ್ಲಿ ಬಡ್ಜೆಟ್ಟನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡದೆ ಇದ್ದ ರೀತಿಯಲ್ಲಿ ಮಾಡಬೇಕು. ರೂಲ್ 54 ಮತ್ತು 55ರ ಪ್ರಕಾರ 'ಕಾಂಡಕ್ಟ್ ಆಫ್ ಬಿಸಿನಸ್ ಈಸ್ ನಾಟ್ ಆರ್ಗ್ಯೂಟ್' ಆದುದರಿಂದ ತಾವು ದಯವಿಟ್ಟು ನಾವು ಹೇಳಿದ ವಿಷಯವನ್ನು ತುರ್ತಾಗಿ ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟು ಸದಸ್ಯರು ಮಾತನಾಡಲು ಅನುವು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳತ್ತೀನೆ.

Sri R. DAYANANDA SAGAR.—You should allow me to speak.

Mr. SPEAKER.—It is sufficiently discussed. I will give my ruling. Since there is sufficient opportunity for Hon. Members to raise these matters on the floor of the House, I withhold my consent to the adjournment motion. Under rule 52 (VI) of the Rules of Procedure. Next item on the agenda, laying of papers on the Table.

Sri R. DAYANANDA SAGAR.—You are doing injustice. You are becoming a party Speaker. You are not the Speaker of the entire House. You are taking the law into your own hands.

Laying of Papers on the Table

Sri VEERENDRA PATIL.—I lay on the table of the House.....

Sri R. DAYANANDA SAGAR.—I am not allowing him. You are doing things according to your own wishes. This will go bad, and this is not fair.

Mr. SPEAKER.—The hon. Member will please resume his seat. I have passed on to the next item.

Sri R. DAYANANDA SAGAR.—No, Sir. I am not allowing to take up the next item.

ಶ್ರೀ ಆರ್.ಜೆ ಸೇಟ್.—ತಾವು ದಯಾನಂದಸಾಗರ್ ಅವರಿಗೆ ಮಾತನಾಡಲು ಅವಕಾಶ ಕೊಡಿ. ಇಲ್ಲದೇಹೋದರೆ ನಾನು ಇಲ್ಲೇ ಸತ್ಯಾಗ್ರಹ ಮಾಡುತ್ತೇನೆ.

ಅಧ್ಯಕ್ಷರು.—ತಾವು ಸೀಟಿಗೆ ಹೋಗಿ ಕುಳಿತುಕೊಳ್ಳಿ.

Sri H. SIDDAVEERAPPA.—I rise to a point of order. All the Hon. Members are in an angry mood. These notifications have been issued during the absence of the Legislature and you have allowed them to bring them to the notice of the House now. Even that reading has not taken place. If it is a question of saving time, you can really let the budget be taken as passed. Even to-day we can adjourn. This is not the way I really feel that the Members are getting tired and exhausted. Please have patience. You better adjourn the House for some time.

Sri K. H. PATIL.—What is the object of laying these notifications now? They have not been given to us.

Mr. SPEAKER.—I want to know whether the notifications have been circulated.

Sri RAMAKRISHNA HEGDE.—All of them have been circulated.

Sri K. H. PATIL.—Let him read every notification one by one. I have got every right to hear him read them I am requesting him through you to read every notification one by one.